O.S. NO. 161/2023
DW –1 .
Dated 09 –02–2026.

ಸಾಕ್ಷಿಯನ್ನು ಈ ದಿನ ದಿನಾಂಕ 09 –02–2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ ವಾದಿಯರ ಪರವಾಗಿ ಶ್ರೀ ಎಮ್ ಎಸ್ ಎ ವಕೀಲರಿಂದಃ

ನನ್ನ ತಾಯಿ ಮತ್ತು ವಾದಿಯರು ನನಗೆ ದಿನಾಂಕ 15–06–2024 ರಲ್ಲಿ ದಾವಾ ಆಸ್ತಿಗಳಲ್ಲಿ ತಮ್ಮ ಪಾಲು ವಿಭಾಗ ಮಾಡಿ ಕೊಡಲು ನನ್ನನ್ನು ಕೇಳಿದರು ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಪ್ರತಿವಾದಿಗೆ ಸಹ ಪಾಲು ವಿಭಾಗ ಮಾಡಲು ಪ್ರತಿವಾದಿಗೆ ಕೇಳಿದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಆಸ್ತಿಗಳಲ್ಲಿ ವಾದಿಯರ ಪಾಲು ಕೊಡಲು ಯಾವುದೇ ತೊಂದರೆ ಮಾಡುತ್ತಿಲ್ಲ ನಾನೇ ವಾದಿಯರಿಗೆ ತೊಂದರೆ ಮಾಡುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿಯರ ದಾವಾ ಆಸ್ತಿ ಸಾಮೂಹಿಕ ಕಬ್ಜಾ ವಹಿವಾಟಿಗೆ ನಾನು ತೊಂದರೆ ಮಾಡುತ್ತೇನೆ ಎಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿಯಲ್ಲಿ ಸಾಗುವಳಿ ಮಾಡುವ ಸಮಯದಲ್ಲಿ ನಾನು ಟ್ಯಾಕ್ಟರ ಹಾಯಿಸಲು ಹೊಗಿದ್ದರಿಂದ ನನ್ನ ವಿರುದ್ಧ ಪೊಲಿಸ ಠಾಣೆಯಲ್ಲಿ ಕ್ರಿಮಿನಲ ಮೊಕ್ಕದ್ದಮೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮೆಲೆ ಬೈಲಹೊಂಗಲ ಜೆ ಎಮ್ ಎಪ ಸಿ ನ್ಯಾಯಾಲಯದಲ್ಲಿ ವಾದಿಯರು ಕೊಟ್ಟ ಪೊಲಿಸ ದೂರಿನ ಮೇಲೆ ಕ್ರಿಮಿನಲ ಮೊಕ್ಕದಮ್ಮೆ ಚಾಲ್ತಿ ಇದೆ ಎಂದರೆ ಸರಿ. ಸದರಿ ಕ್ರಿಮಿನಲ ಕ್ರಿಮಿನಲ ಮೊಕ್ಕದ್ದಮೆ ಯಾವ ಕಾರಣಕ್ಕಾಗಿ ನನ್ನ ಮೇಲೆ ದಾಖಲಾಗಿರುತ್ತದೆ ಎಂದು ನನಗೆ

O.S. NO. 161/2023

DW –1 .

Dated 09 –02–2026.

ಗೊತ್ತಿಲ್ಲ. ನಾನು ವಾದಿಯರ ಮೇಲೆ ನಾನು ಟ್ಯಕ್ಟರ ಹಾಯಿಸಲು ಹೊಗಿದ್ದರಿಂದ ಕ್ರಿಮಿನಲ ಮೊಕ್ಕದ್ದಮೆ ದಾಖಲಾದ ವಿಷಯ ನನಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಗಳಲ್ಲಿ 3/5 ಅಂಶ ಹಿಸ್ಸೆ ಕೊಡುವುದಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ – ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.